ಚಪ್ಪಲಿಯಲ್ಲಿ ಬಂದಿದ್ದ ಹೊಚ್ಚಹೊಸ ಎಂಎಲ್‌ಎಗೆ ಶೇಕೇಂಡ್ ಕೊಟ್ಟು ಆ ಕೈಯನ್ನು ಕಣ್ಣಿಗೊತ್ತಿಕೊಂಡ ಹರಿಜನವು ಪಾವನವಾಯಿತು.

ಎಂಕುಟೇಶ್ವರನ ಗುಡಿಗೆ ಬಂದ ಹೊಸ ಎಂಎಲ್‌ಎ ರಾಕೆಟ್ ವೇಗದಲ್ಲಿ ಸಾಗುತ್ತಿದ್ದ ದೇವಸ್ಥಾನದ ಕೆಲಸವನ್ನು ಕಣ್ತುಂಬಿಕೊಳ್ಳುವಾಗ ಆ ಜನದ ಮಧ್ಯದಾಗಿಂದ ಒಂದೇ ಸಲ ಹೌ... ಯಪ್ಪ... ಯವ್ವೊ... ಎಂಬ ಸ್ವರಗಳು ಜೋರಾಗಿ ಕೇಳಿಬಂದು ಅದೇನೆಂದು ನೋಡಲಾಗಿ 'ನಿನ್ನ ಗೆಲ್ಲಿಸಿಕೊಡೋದು ನನಗೆ ಬಿಡು' ಎಂದು ಭವಿಷ್ಯ ನುಡಿದಿದ್ದ ಸುಂಕನೇ ತಿರುಗೂ ಅಂತದೇ ಆವೇಶ ಹಿಡಿದು ಈರುಮಂಡಿ ಹಾಕ್ಕೊಂಡು ಕುಂತಿದ್ದ. ಈಗ ತಿರುಗಾ ಡಬ್ಬಲ್ ಧಮಾಕ ಅನ್ನಂಗೆ 'ಲೇ ನನ್ನ ಬಸವನೇ ನಿನ್ನ ಮಂತ್ರಿ ಮಾಡ್ತೀನಿ ನಂಗೇನು ಕೊಡ್ತೀಯ' ಅಂತು. ಚುನಾವಣೇಲಿ ಗೆಲ್ಲೋಕು ಮುಂಚೆ ನಡೂ ಬಗ್ಗಿಸಿ ನಿಂತಿದ್ದ ಪಕ್ಷೇತರನು ಈ ಬಾರಿ ಸುಂಕನ ಮುಂದೆ ನಡೂ ಬಗ್ಗಿಸಿ ನಿಲ್ಲಲು ಚೂರು ಹಿಂದ್ಕೂ-ಮುಂದ್ಕೂ ನೋಡ್ಕಂಡ. 'ಆಯ್ತು ಸ್ವಾಮಿ ನೀಕೇಳಿದ್ದು ಕೊಡ್ತೀನಿ' ಅಂದಕೂಡಲೇ 'ಲಕ್ಷ್ಮಿ-ಪದ್ಮಾವತಿ ಸಮೇತ ಒಂದು ಮೆರೆ ದೇವರು ಜೊತೆಗೆ ಎರಡು ಅರಿಗೆಗಳನ್ನ ಮಾಡಿಸಿಕೊಡು ನಿನ್ನ ಮಂತ್ರಿ ಮಾಡ್ತೀನಿ' ಅಂದಿತ್ತೇ, ಆ ಆವೇಶವು ಕಳೆದ ಬಾರಿ ಟ್ಯಾಂಕಿ ನೀರಾಕಿ ಮೈಪೂರ್ತಿ ನೆನೆಸಿದನ್ನು ಗೆಪ್ತಿ ತಂದುಕೊಂಡು ಈ ಬಾರಿ ತಾನಾಗಿ ತಾನೇ ಇಳಿದೋಯಿತು. ಈಗಾಗಲೇ ತನ್ನನ್ನ ಎಂಎಲ್‌ಎ ಆಗಂಗೆ ಮಾಡ್ತೀನಿ ಅಂದಿದ್ದ ಈ ಆವೇಶದ ಮಾತು ಈಗಾಗಲೇ ಸತ್ಯವೂ ಆಗಿತ್ತು. ಇದರ ಬಗ್ಗೆ ಚರ್ರೂರೇ ಯೋಚನೆ ಮಾಡಿದ ಪಕ್ಷೇತರನಿಗೂ ಇದು ನಿಜವೇ ಇರಬಹುದಾ ಅನ್ನಿಸಿಸತೊಡಗಿತು. ಎಂಎಲ್‌ಎ ಆಗಿರೋದೇ ಸಾಕು ಮಂತ್ರಿಗಿರಿನೂ ಬೇಡ ಅಂದುಕೊಂಡನಾದರೂ ಪಕ್ಷೇತರನ ಮನಸಲ್ಲಿ ಹೊಸ ಕನಸೊಂದನ್ನು ಸೂಜಿ ಏರ್ಪಿನ್ನು ಮಾರುವ ಸುಂಕನು ಬಿತ್ತಿಬಿಟ್ಟಿದ್ದ. ಆದ್ರೆ ಆಗಲಿ - ಹೋದ್ರೆ ಹೋಗಲಿ ಅನ್ನಂಗೆ ಹೊಸ ಎಂಎಲ್‌ಎ ಮಾದಿಗರ ಮುಖವನ್ನಲ್ಲದಿದ್ದರೂ ಎಂಕುಟೇಸ್ವರನ ಮಕವಾ ನೋಡ್ಕಂಡು ಸುಂಕಾವೇಶದ ಬೇಡಿಕೆಯನ್ನು ಒಪ್ಪಿಕೊಂಡು ಹೋದ.

* * *

ಇತ್ತಲಾಗೆ ಬೆಂಗಳೂರಿನ ಅತ್ತಲ-ಇತ್ತಲ ಎಂಎಲ್‌ಎಗುಳೆಲ್ಲಾ ಕಪ್ಪೆ ಓಟ ಆಡಲು ಶುರು ಮಾಡ್ಕಂಡಿದದ್ದಿತರ ಎಲ್ಲಾ ಪಾರ್ಟಿಗಳಿಗಿಂತ ಎಲ್ಲೇ-ಎಲ್ಲು ನಂಬರಿನಿಂದ ಮುಂದಿದ್ದ ಪಕ್ಷವು ಕ್ಲೀನಿಂಗ್ ಗ್ರೈಂಡರ್ ಒಳಗಾಕಿದ ಕೋಳಿಯು ತಿರುಗುವಂತೆ ತಿರುಗಿ ಎದುರು ಪಕ್ಷದವರು ಕುಣಿಸುತ್ತಿದ್ದ ಲಕ್ಷೀದೇವಿಯ ಎದುರಿಗೆ ಸರ್ಕಾರವ ಮಾಡಲಾಗದೆ ಅರ್ಧಂಬರ್ಧ ಕತ್ತು ಕುಯ್ದು ಪುಕ್ಕ ತರುದು ಹುಕ್ಕಿಗೆ ನೇತಾಕಿದ ಬೈಲರ್ ಕೋಳಿಯಂಗೆ ಅತ್ತಲೂ- ಇತ್ತಲೂ ತೂಗಾಡುತ್ತಿತ್ತು. ಈ ಅವಕಾಶವ ಆ ಮಾದಿಗರ ಎಂಕುಟೇಶ್ವರನೇ ನನಗಾಗಿ ಮಾಡಿರಬಹುದಾ ಎಂದು ಕೆಲ ಕಾಲ ಯೋಚಿಸಿದ ಪಕ್ಷೇತರನು 'ಮಂತ್ರಿ ಪದವಿ ಕೊಡುವೆ ಬಾ' ಅಂದ ತಾತನ ಪಕ್ಷದ ಕಡೀಕೆ ಮೂರು ಪಲ್ಟಿಹೊಡಕಂಡು ನೆಗೆದುಬಿಟ್ಟ. ಮಂತ್ರಿ ಆಗಿದ್ದೇ ತಡ ಸಂಪಿಗೆಪುರದ ಮಾದಿಗರ ಎಂಕುಟೇಸ್ವರನ ಗುಡಿಗೆ ಅದು ಕೇಳಿದಂಥಾ ಮೆರೆ ದೇವರನ್ನೂ, ಎರಡು ಹರಿಗೆಗಳನ್ನೂ ಮಾಡಿಸಿಕೊಟ್ಟು ಮಾತಿಗೆ ತಪ್ಪದ ರಾಜಕಾರಣಿ ಎಂದು ಜನರ ಬಾಯಿ-ಬಾಯಾಗೇ ಬಂದ. ಅಂದಿನಿಂದ ಈ ಮಾದಿಗರ ಎಂಕುಟೇಸನ ಬಗ್ಗೆ ಒಂಥಾರಾ ಭಕ್ತಿಯನ್ನೂ ಇಕ್ಕಿಕೊಂಡ.

ಸಂಪಿಗೆಪುರದ ಹರಿಜನಗಳೆಲ್ಲಾ ಆ ದೇವುಸ್ಥಾನಕ್ಕೆ ಒಂದು ಟ್ರಸ್ಟ್ ಮಾಡ್ಕಂಡು, ಸೂಜಿ ಏರ್ಪಿನ್ನು ಮರ್ಕಂಡಿದ್ದ ಸುಂಕನ್ನೇ ಪರ್ಮನೆಂಟಾಗಿ ದಾಸಪ್ಪನ್ನ ಮಾಡಬೇಕು ಅಂತ ತೀರ್ಮಾನ ತಕ್ಕಂಡು ಅವನ್ನ ತಿರುಪತಿಗೆ ಕರಕಂಡೋಗಿ ಮುದ್ರೆ ಹಾಕಿಸಿಕೊಂಡು ಬಂದ್ರು. ಕೆರೆ ಏರಿ ಮ್ಯಾಕೋಗಿ ಪುಣಾವಾದ್ನೆ ಮಾಡಿಕೊಂಡು ಊರ ಮಂದಿನ ಹನುಮಂತಪ್ಪನ ಗುಡಿ ಮುಂದೆ ಬಿಲ್ಲುಗೂಡು ಹೂಡಿ, ನೂರೊಂದು ಎಡೆ ಹಾಕಿ, ಅದರ ಸುತ್ತಲೂ ನಾಕೂ ದಿಕ್ಕಿಗೂ ನಿಂತು ಎಂಕುಟೇಸ್ವರನ ದಶಾವತಾರದ ಕತೆಯನ್ನು ಹೇಳುತ್ತಿರಲಾಗಿ ಸಂಪಿಗೆಪುರದ ಪರಮ ವಿಷ್ಣುವಿನ ಭಕ್ತರೂ, ಬ್ರಾಹ್ಮಣೋತ್ತಮರೂ ಆದ ವಾಸುದೇವಪ್ಪನೋರೋ ಅದೇ ಹಾದಿಯಲ್ಲಿ ಬಂದರು. ವಾಸುದೇವಪ್ಪನೋರು ಬರೋದಕ್ಕೂ ಸುಂಕನು ವರಾಹಾವತರಾದ ಕಥೆಯನ್ನು ಹೇಳೋದೂ ಒಂದೂ ಆಯಿತು.

'ಪರಾಕು ಸ್ವಾಮಿ ಪರಾಕು' ಎಂದಾಗ ಊದುಗಡ್ಡಿ ಹಿಡಿದು ದಾಸಪ್ಪನೊಂದಿಗೆ ನಿಂತಿದ್ದ ನಾಲ್ಕು ಜನ ಬಹುಪಾರಾಕ್ ಅಂದರು. 'ಮೂರು ಖಂಡುಗ ಅನ್ನ,